ಅಷ್ಟು ದೂರದ ಸಂಬಂಧ ಮೇಸ್ತ್ರಿಗೂ, ಟೀಚರಿಗೂ ಇಷ್ಟವಿರಲಿಲ್ಲ. ಅಲ್ಲದೆ ಅಳಿಯನಿರುವುದು ಅಮೆರಿಕನ್ ಖಾಸಗಿ ಕಂಪನಿಯಲ್ಲಿ. ಕೆಲಸ ಶಾಶ್ವತವಲ್ಲ. ಅದಕ್ಕೆ ಪೆನ್‌ಶನ್ ಇಲ್ಲ. ಕಂಪನಿ ಮುಚ್ಚಿಹೋದರೆ ಮತ್ತೆ ಬಾಳೇ ಇಲ್ಲ. ಮೇಸ್ತ್ರು ಒಬ್ಬಳೇ ಮಗಳ ಕಣ್ಣೀರಿಗೆ ಕರಗಿದರು. ಟೀಚರು, "ನಾವು ಮದುವೆಯಾದಾಗ ಜಾತಿ ನೋಡಲಿಲ್ಲ ನಿಜ. ಆದರೆ ಗಂಡನಿಗೆ ಆರ್ಥಿಕ ಭದ್ರತೆ ಇಲ್ಲದಿದ್ದರೆ ನಿಮ್ಮ ಪೆನ್‌ಶನ್ ನಮಗೆ ನಾಲ್ವರಿಗೆ ಸಾಕಾಗತ್ತಾ? ಮುಂದೆ ಹುಟ್ಟಲಿರುವ ಕೂಸುಗಳ ಗತಿಯೇನು?" ಎಂದು ಆಕ್ಷೇಪ ಎತ್ತಿದ್ದರು. ಆದರೆ ಮಗಳ ಕಣ್ಣೀರಿಗೆ ಅವರು ಮೇಸ್ತ್ರಿಗಿಂತ ಮೊದಲು ಕರಗಿದ್ದರು. "ಹೋಗಲಿ ಬಿಡ್ರಿ. ಅವರವರ ಅದೃಷ್ಟ. ಅವಳ ಹಣೆಯಲ್ಲಿ ಬರೆದಂತೆ ಆಗುತ್ತದೆ. ಎಲ್ಲಿಯ ಗಂಡು ಎನ್ನುವುದಕ್ಕಿಂತ ಹೇಗೆ ಸಂಭಾಳಿಸಿಕೊಂಡು ಹೋಗುತ್ತಾರೆ ಎನ್ನುವುದು ಮುಖ್ಯ ಎಂದಿದ್ದರು. ಈಗ ಇಬ್ಬರ ದೃಷ್ಟಿಯೂ ಲೇಬರ್ ವಾರ್ಡ್‌ನ ಬಾಗಿಲ ಮೇಲೆಯೇ ನೆಟ್ಟಿದೆ. ಗಂಡೋ, ಹೆಣ್ಣೋ?

ಈ ಪ್ರಶ್ನೆ ಮನೆಯಲ್ಲೂ ಚರ್ಚಿತವಾದದ್ದುಂಟು. ಮಗಳ ಕ್ಷಿತಿಜಳದ್ದು ಒಂದೇ ಮಾತು. "ನನಗೆ ಹೆಣ್ಣೇ ಬೇಕು. ನಾಳೆ ನಾನು ಮುದಿ ಬಿದ್ದಾಗ ಅವಳು ನನ್ನನ್ನು ನೋಡಿಕೊಳ್ಳುತ್ತಾಳೆ. ಈಗ ಹೆಣ್ಮಕ್ಕಳೇ ಗಂಡುಗಳಿಗಿಂತ ಸ್ಟ್ರಾಂಗ್. ಹೆಣ್ಮಗು ಆದರೆ ನನ್ನ ಮಾತು ಕೇಳುತ್ತಾಳೆ."

ಮೇಸ್ತ್ರು ಮತ್ತು ಟೀಚರು ಪರಸ್ಪರ ಮುಖ ನೋಡಿಕೊಂಡರು. ಕ್ಷಿತಿಜ ಎಲ್ಲಿ ತಮ್ಮ ಮಾತು ಕೇಳಿದ್ದಾಳೆ? ಆದರೂ ಅವಳ ಮಾತುಗಳನ್ನು ತಳ್ಳಿ ಹಾಕುವಂತಿಲ್ಲ. ಹೆಣ್ಣನ್ನು ಸಂಭಾಳಿಸುವುದು ಅಷ್ಟು ಕಷ್ಟವಾಗಲಾರದು. ಗಂಡಾದರೆ ನಾಳೆ ಅವನ ಕೈ ಹಿಡಿದು ಬರುವವಳು ಹೇಗಿರುತ್ತಾಳೋ? ಪ್ರತ್ಯೇಕ ಮನೆ ಬೇಕೆಂದು ಸಂಸಾರ ಒಡೆದರೇನು ಗತಿ? ಅಥವಾ ತಮ್ಮಿಬ್ಬರನ್ನೂ ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಸಿದರೆ ತಮ್ಮ ಪಾಡೇನು? ಹೆಣ್ಣು ಮಗುವಾದರೆ ಹಾಗೆ ಮಾಡಲಿಕ್ಕಿಲ್ಲ.

ಆದರೆ ನಂಬುವುದು ಹೇಗೆ? ಹೆಣ್ಣಿಗೆ ಗಂಡ ಸಿಕ್ಕಮೇಲೆ ತಮ್ಮ ಬಗ್ಗೆ ಅಕರಾಸ್ಥೆ ಕಡಿಮೆಯಾಗಲಿಕ್ಕಿಲ್ಲವೆಂದು ಹೇಗೆ ಹೇಳುವುದು? ಗಂಡ ದಯಾರ್ದ್ರ ಹೃದಯದವನಲ್ಲದಿದ್ದರೆ ಈ ಮುದಿ ಗೂಬೆಗಳು ಮನೆಯಲ್ಲಿ ಯಾಕಿರಬೇಕೆಂದು ಹೊರಗಟ್ಟಿದರೆ?

ಆಗ ಬಾಡಿಗೆ ಮನೆ ಮಾಡಿಕೊಳ್ಳುವುದು. ಸಾವನ್ನು ಸ್ವಾಗತಿಸಲೆಂದೇ ಕಾದಿರುವ ವೃದ್ಧರ ಜೊತೆ ಬದುಕೆಂಬುದೇ ಇರುವುದಿಲ್ಲ.

ಲೇಬರ್ ವಾರ್ಡಿನ ಬಾಗಿಲು ತೆರೆಯಿತು. ಡಾ. ರವಿಚಂದ್ರ ಹೊರಬಂದರು. ಅವರನ್ನು ನೋಡಿ ಸಿಮೆಂಟು ಬೆಂಚುಗಳಲ್ಲಿ ಕೂತಿದ್ದವರು ಆಸಕ್ತಿಯಿಂದ ಎದ್ದು ನಿಂತರು. ಎಲ್ಲರ ಮುಖಗಳಲ್ಲಿ, "ದಿಗಂತ್ ಯಾರೂ?" ಒಂದೇ ಪ್ರಶ್ನೆ; ಗಂಡೋ, ಹೆಣ್ಣೊ? ಅಳಿಯ ದಿಗಂತ್ ಮುಂದೆ ಬಂದ.

ಅವನನ್ನು ನೋಡಿದರೂ ಡಾ. ರವಿಚಂದ್ರ ಮೇಸ್ತ್ರನ್ನೇ ಉದ್ದೇಶಿಸಿ ಮಾತಾಡಿದರು.

"ನೋಡಿ ಮೇಸ್ತ್ರೇ. ಈಗಿನ ಡೆಲಿವರಿಗಳೆಲ್ಲಾ ಕಾಂಪ್ಲಿಕೇಶನ್ನೇ. ನಾವು ನಾರ್ಮಲ್ ಡೆಲಿವರಿಗಾಗಿ ಕಾಯುತ್ತಿದ್ದೇವೆ. ಅದಕ್ಕೆ ಸಮಯ ಹಿಡಿಯುತ್ತದೆ. ಅದು ಆಗದೆ ಇದ್ದರೆ ಸಿಸೇರಿಯನ್ನೇ ಗತಿ. ಈಗ ಮಾತ್ರೆ ಮತ್ತು ಇಂಜೆಕ್ಷನ್ ಕೊಡ್ತಿದೀವಿ. ಬಾಲ್ ಥೆರಪಿ ಅಂತಿದೆ. ಅದನ್ನೂ ಮಾಡ್ತೀವಿ. ಯುಟರಸ್ ಓಪನ್ ಆದರೆ ನಾರ್ಮಲ್ ಡೆಲಿವರಿನೇ ಆಗತ್ತೆ. ಅದಾಗದಿದ್ರೆ, ನೀವೆಲ್ರೂ ಒಪ್ಪಿದ್ರೆ ಸಿಸೇರಿಯನ್ ಮಾಡ್ತೀವಿ. ಇದಕ್ಕೆ ದಿಗಂತ್ ಒಪ್ಪಿಗೆ ಮುಖ್ಯ. ರಕ್ತ ಬೇಕಿದ್ರೆ ನಿಮ್ದೆ ಕೊಡಬೇಕಾಗತ್ತೆ."

ಡಾಕ್ಟ್ರಿಗೆ ತನ್ನ ತಾಯಿಯ ತವರು ಮನೆ ನೆನಪಾಯಿತು. ತಾಯಿಯ ತಾಯಿ ಭರ್ತಿ ಒಂದು ಡಜನ್ ಮಕ್ಕಳನ್ನು ಹೆತ್ತಿದ್ದರು. ಒಂದರ ಹೆರಿಗೆಗೂ ಆಸ್ಪತ್ರೆಗೆ ಹೋದವರಲ್ಲ. ಸೂಲಗಿತ್ತಿ ಚಿನ್ನಕ್ಕ ಮೊದಲ ಹೆರಿಗೆಗಳನ್ನು ಮಾಡಿಸಿದರೆ ಅವಳ ಸೊಸೆ ಸೂಲಗಿತ್ತಿ ಬೊಮ್ಮಿ ಕೊನೆಯ ಹೆರಿಗೆಗಳನ್ನು ಮಾಡಿಸಿದ್ದಳು. ಈಗ ರಕ್ತಪರೀಕ್ಷೆ ಇರಲಿಲ್ಲ. ಸ್ಕ್ಯಾನಿಂಗ್ ಎಂಬ ಪದವನ್ನು ಕೇಳಿಯೇ ಇರಲಿಲ್ಲ. ಇಲ್ಲಿ ಹದಿನೈದು ದಿನಕ್ಕೊಮ್ಮೆ ಸ್ಕ್ಯಾನಿಂಗ್. ಆದರೂ ಡಾಕ್ಟರರು ಸಿಸೇರಿಯನ್‌ನ ಹೆಸರು ಎತ್ತುತ್ತಿದ್ದಾರೆ. ಏನು ಮಾಡುವುದು? ಇಷ್ಟಕ್ಕೂ ಮಗು ಹೆಣ್ಣೋ? ಗಂಡೋ?

ಒಳಗಿಂದ ಮಗಳು ಕ್ಷಿತಿಜಾಳ ಸ್ವರ ಕೇಳಿಸಿತು. "ಅಯ್ಯಮ್ಮೊ ಡಾಕ್ಟ್ರರೇ ಈ ನೋವು ಸಹಿಸಲಾರೆ. ಒಮ್ಮೆ ಸಿಸೇರಿಯನ್ ಮಾಡಿ ಮಗುವನ್ನು ಹೊರ ತೆಗೆಯಿರಿ. ಇಲ್ಲದಿದ್ರೆ ನಾನು ಸತ್ತೇ ಹೋಗ್ತೀನಿ."

ಮೇಸ್ತ್ರು ಮತ್ತು ಟೀಚರ ಕಪ್ಪಿಟ್ಟ ಮುಖ ನೋಡಿ ಡಾ. ರವಿಚಂದ್ರ ಸಮಾಧಾನಿಸಿದರು. "ದಿಗಂತ್ ಈ ಅಪ್ಲಿಕೇಶನ್ನಿನ ನೀವು ತುಂಬಿ ಸಹಿ ಹಾಕಿ. ನಾವು ಸಿಸೇರಿಯನ್‌ಗೆ ಸಿದ್ಧತೆ ಮಾಡ್ಕೋತೀವಿ."

ಅಪ್ಲಿಕೇಶನ್ ದಿಗಂತ್ ಕೈಗಿತ್ತು ಡಾಕ್ಟರು ಒಳಹೋದರು. ಅಷ್ಟರವರೆಗೆ ಎದ್ದು ನಿಂತವರೆಲ್ಲ ಗೋಣಗಿಕೊಂಡು ಸುಮ್ಮನೆ ಕೂತರು. ಟೀಚರು ಮೇಸ್ತ್ರನ್ನು ಮಾತಿಗೆಳೆದರು.

"ಹೆಣ್ಣೇ ಬೇಕೆಂದು ನೀವು ಬಯಸುತ್ತೀರಿ. ಹೆಣ್ಣಿನ ಕಷ್ಟ ನಿಮಗೇನು ಗೊತ್ತು? ಈಗ ನೋಡಿ ಮಗಳು ಕ್ಷಿತಿಜಳ ಒದ್ದಾಟ. ನಾಳೆ ಅವಳು ಅವಳ ಮಗಳ ಹೆರಿಗೆ ಕಾಲದಲ್ಲಿ ಹೀಗೆ ಕಾಯಬೇಕು. ಅದರ ಬದಲು ಗಂಡು ಆದರೆ ಅವನ ಹೆಂಡ್ತಿ ಕಡೆಯೋರು ಹೆರಿಗೆ ಮಾಡಿಸ್ತಾರೆ. ನಮಗೆ ಯಾವ ಒದ್ದಾಟವೂ ಇರುವುದಿಲ್ಲ." ಮೇಸ್ತ್ರು ಉತ್ತರಿಸುವ ಮೊದಲೇ ಲೇಬರ್ ವಾರ್ಡಿನ ಬಾಗಿಲು ತೆರೆದುಕೊಂಡಿತು. ನರ್ಸೊಬ್ಬಳು ಹೊರಬಂದಳು. "ದಿಗಂತ್ ಯಾರು? ಒಳ ಬನ್ನಿ. ಡಾಕ್ಟರರು ಕರೀತಿದ್ದಾರೆ."

ದಿಗಂತ್ ಒಳಹೊಕ್ಕ. ಲೇಬರ್ ವಾರ್ಡಿನ ಉದ್ದಕ್ಕೂ ಮಂಚಗಳು. ಅವುಗಳನ್ನು ಪ್ರತ್ಯೇಕಿಸಲು ಹಸಿರು ಬಣ್ಣದ ಕರ್ಟನ್‌ಗಳು. ಪ್ರವೇಶವಾಗುವಲ್ಲಿ ಪುಟ್ಟದೊಂದು ಚೇಂಬರ್.

ಡಾ. ರವಿಚಂದ್ರ ಪಿಸುದ್ದನಿಯಲ್ಲೆಂದರು. "ನೋಡಿ ದಿಗಂತ್. ಕಂಡೀಶನ್ ಫೇವರೆಬಲ್ ಆಗಿಲ್ಲ. ಅದಕ್ಕೇ ನಾವು ಸಿಸೇರಿಯನ್ನಿಗೆ ಒಪ್ಪಿರುವುದು. ಇಲ್ಲದಿದ್ದರೆ ನಾರ್ಮಲ್ ಡೆಲಿವರೀನೇ ಮಾಡ್ತಿದ್ದೆವು. ಈಗ ನೀವು ಗಾಡ್ ಥೆರಪಿಗೆ ಸಿದ್ಧರಾಗಿರಬೇಕು."

"ಹಾಗಂದರೇನು ಡಾಕ್ಟರ್?"

"ರೋಗಿಗಳಿಗೆ ಆಪರೇಷನ್ ಮಾಡುವಾಗ ಸಂಗೀತ ಕೇಳಿಸ್ತೀವಿ. ಅದು ಮ್ಯೂಸಿಕ್ ಥೆರಪಿ. ನಾವು ಸಿಸೇರಿಯನ್ ಮಾಡುವಾಗ ನೀವು ನಿಮ್ಮ ಇಷ್ಟದೈವವನ್ನು ಪ್ರಾರ್ಥಿಸುತ್ತಿರಬೇಕು. ಅದು ಗಾಡ್ ಥೆರಪಿ. ನಾವು ಪ್ರಯತ್ನ ಪಡಬಹುದು. ಆದರೆ ಫಲಿತಾಂಶ ನಮ್ಮ ಕೈಯಲ್ಲಿಲ್ಲ. ಅದಕ್ಕೇ ಗಾಡ್ ಥೆರಪಿಯನ್ನು ನಾವು ಸೂಚಿಸುವುದು. ಇದನ್ನು ಕ್ಷಿತಿಜಾಳಿಗೆ ಹೇಳಿದ್ರೆ ಅವಳು ಐ ಡೋಂಟ್ ಬಿಲೀವ್ ಗಾಡ್. ಸಯನ್ಸು ಇಷ್ಟು ಮುಂದುವರಿದಿರುವಾಗ ಯಾಕೆ ಆಪರೇಷನ್ನು ಸಕ್ಸಸ್ ಆಗಲ್ಲ ಅಂತ ನನ್ನೇ ಪ್ರಶ್ನಿಸುತ್ತಾಳೆ."

ಅವಳು ದೇವರ ಬಗ್ಗೆ ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರಿಸಲು ದಿಗಂತ್‌ನಿಂದ ಸಾಧ್ಯವಾಗುತ್ತಿರಲಿಲ್ಲ. ಆಗವನು ಅವಳೊಡನೆ ಕಾಂಪ್ರೊಮೈಸ್ ಮಾಡಿಕೊಳ್ಳುತ್ತಿದ್ದ. "ನಾನು ತುಂಬಾ ಧಾರ್ಮಿಕ ಕುಟುಂಬದಿಂದ ಬಂದವನು. ನಂಬಿಕೆಗಳನ್ನು ಬಿಡೋದು ಕಷ್ಟ" ಎಂದಿದ್ದ. ನಿನ್ನ ನಂಬಿಕೆ ನಿನಗೆ. ಅವನ್ನು ನನ್ನ ಮೇಲೆ ಹೇರಬೇಡ" ಎಂದು ಅವಳು ಖಂಡ ತುಂಡವಾಗಿ ಹೇಳಿದ್ದಳು.

"ಆಗಲಿ ಡಾಕ್ಟರ್. ನಿಮ್ಮ ಕರೆ ಬರುವವರೆಗೆ ನಾನು ಆ ಗಣಪತಿ ಮುಂದೇನೇ ನಿಂತಿರ್ತೀನಿ."

ಹೊರಬಂದ ದಿಗಂತ್‌ನ ಪೇಲವ ಮುಖ ನೋಡಿ ಮೇಸ್ತ್ರು ಏನನ್ನೂ ಕೇಳಲಿಲ್ಲ. ಟೀಚರಲ್ಲಿ ಅವನಾಗಿಯೇ ಎಲ್ಲವನ್ನೂ ಹೇಳಿಕೊಂಡ. ಅವರಿಗೆ ಬ್ರಹ್ಮಾಂಡ ಗಾಬರಿ ಆಯಿತು.

"ರೀ ಕೇಳಿಸ್ಕೊಂಡ್ರಾ? ಡೆಲಿವರಿ ಕಾಂಪ್ಲಿಕೇಟೆಡ್ ಅಂತೆ."

"ಗಾಬ್ರಿ ಬೇಡ್ವೆ? ಇದು ಬರಿಯ ಹಾಸ್ಪಿಟಲ್. ಮೆಡಿಕಲ್ ಕಾಲೇಜ್ ಹಾಸ್ಪಿಟಲ್. ಇಲ್ಲಿ ಎಲ್ಲವೂ ಇವೆ. ನೀನು ನಿಶ್ಚಿಂತೆಯಿಂದಿರು."

ಟೀಚರ್ ಸ್ವರ ತಗ್ಗಿಸಿದರು. "ಗಂಡೇ ಇರಬಹುದಲ್ವಾ?" "ಅದ್ಹೇಗೆ ಹೇಳ್ತಿಯಾ? ಇಷ್ಟು ಹೊತ್ತಾದರೂ ಮಗು ಹೊರ ಬರಲಿಲ್ಲ ಅಂದರೆ ಅದು ಹೆಣ್ಣೇ ಇರಬೇಕು. ಸಿಂಗಾರ ಮಾಡ್ಕೊಳ್ಳದೆ ಹೊರಬರಲು ತಕರಾರು ಮಾಡ್ತಿದೆ."

ಟೀಚರಿಗೆ ಮೇಸ್ತ್ರು ಜೋಕು ಇಷ್ಟವಾಗಲಿಲ್ಲ. ಗಂಡೋ–ಹೆಣ್ಣೋ? ಗಂಡಾದ್ರೆ ತಾನು ಹೆಚ್ಚು ಚಿಂತೆ ಮಾಡಬೇಕಿಲ್ಲ. ಎಲ್ಲಿಗೆ ಬೇಕಾದ್ರೂ, ಯಾವಾಗ ಬೇಕಾದ್ರೂ ಹೋಗಿ ಬರಬಹುದು. ಗಡಿಗಳನ್ನು ಗುರುತಿಸಬೇಕಾಗಿಲ್ಲ. ಬೇಲಿ ಕಟ್ಟಬೇಕಿಲ್ಲ. ಹೆಚ್ಚೆಂದರೆ ಪೋಲಿ ಅಂತ ಬೈಬಹುದು ಗಂಡು ಮಕ್ಕಳಿಗೆ ಅದೂ ಒಂದು ಪ್ರಶಸ್ತಿಯೇ.

ಮೇಸ್ತ್ರು ಯೋಚಿಸುತ್ತಿದ್ದರು. ಹೆಣ್ಣಾದರೆ ಎಷ್ಟು ಚೆಂದ. ಎರಡು ಜಡೆ ಹಾಕಿ ಎದುರು ನೇತು ಬಿಡಬೇಕು. ಬಣ್ಣ ಬಣ್ಣದ ಡ್ರೆಸ್ಸಲ್ಲಿ ಅಲಂಕಾರ. ಕಣ್ಣಿಗೆ ಕಾಡಿಗೆ; ಕೈಗೆ ಬಳೆ; ಕಾಲಿಗೆ ಬೆಳ್ಳಿ ಗೆಜ್ಜೆ; ಕಿವಿಗೆ ಲೋಲಾಕು. ಮೂಗಿಗೆ ನತ್ತು. ಲಂಗ, ದಾವಣಿ ಮಲ್ಲಿಗೆ ಜಡೆ. ಆಹಾಂ ಸಾಕ್ಷಾತ್ ಶ್ರೀಲಕ್ಷ್ಮಿಯೇ. ಗಂಡಾದರೆ ಏನಿರತ್ತೆ ವೈವಿಧ್ಯ? ಜೀನ್ಸು ಚೆಡ್ಡಿ, ಒಂದು ಬನಿಯನು. ಮೇಸ್ತ್ರು ಟೀಚರಿಗೆ ಕೇಳಿಸುವಂತೆ ಹೇಳಿದರು. "ನನಗೆ ಹೆಣ್ಮಗು ಇಷ್ಟ. ಹೆಣ್ಮಗೂನೇ ಆಗೋದು."

"ಏನ್ರಿ ಇದು. ಹಗಲುಗನಸು ಕಾಣ್ತಿದ್ದೀರಾ?